
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 12 | SEPTEMBER - 2026

# ವಿಜಾಪುರದ ಆದಿಲ್‌ಶಾಹಿಗಳು ಚಿತ್ರಕಲಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು

ಜಿ.ವಿ.ಶಶಿಕಲಾ
ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ



ವಿಜಾಪುರ ಸುಲ್ತಾನರೆಲ್ಲ ಸರಳತೆಯ ಸಂಕೇತವಾಗಿದ್ದು, ಸಾಹಿತ್ಯ, ಸಂಗೀತ, ಚಿತ್ರ, ವಾಸ್ತು ಶಿಲ್ಪ ಕಲೆಗಳ ಆರಾಧಕರಾಗಿದ್ದರು, ಹಿಂದೂ ಮುಸ್ಲಿಂ ಸಮನ್ವಯತೆಯೊಂದಿದ್ದರು. ದಖ್ಖನದ ಐದು ಷಾಹಿರಾಜರುಗಳ ಪೈಕಿ ವಿಜಾಪುರ ಆದಿಲ್‌ಶಾಹಿಗಳು ಗಣ್ಯರಾಗಿದ್ದು, ಕರ್ನಾಟದ ವಿಶಾಲ ಭಾಗಗಳಿಗೆ ಅವರು ಒಡೆಯರಾದರು. ಆದಿಲ್‌ಶಾಹಿಗಳು ವಾಸ್ತುಶಿಲ್ಪ ಹಾಗೂ ಚಿತ್ರಕಲೆಗೆ ಹಿಂದೂ–ಮುಸ್ಲಿಂ ಶೈಲಿಯ ರಚನೆಗಳನ್ನು ನೋಡಬಹುದು. ಸ್ಥಳೀಯ ಪ್ರಾದೇಶಿಕ ಲಕ್ಷಣಗಳಿಂದ ಪ್ರಾದೇಶಿಕತೆಯ ಹೆಸರಿನೊಂದಿಗೆ ಗುರುತಿಸಿಕೊಂಡಿದೆ. ಅಹಮದನಗರ, ಗೋಲ್ಕೊಂಡ ಮತ್ತು ಬಿಜಾಪುರ–ಬೀದರ ಈ ಮುಸ್ಲಿಂ ರಾಜ್ಯಗಳಲ್ಲಿ ಬೆಳೆದುಬಂದ ಚಿತ್ರಕಲಾ ಪದ್ಧತಿಯನ್ನು "ಡೆಕ್ಕನ್ ಶೈಲಿ" ಎಂದು ಕರೆಯಲಾಗಿದೆ. ತಾಳಿಕೋಟೆಯ ಯುದ್ಧದ ನಂತರ ವಿಜಯನಗರದ ಚಿತ್ರಕಲಾವಿದರನ್ನು ಅಹಮದನಗರಕ್ಕೂ, ಬಿಜಾಪುರಕ್ಕೂ ಕರೆದುಕೊಂಡು ಬಂದರೆಂದು ಕೆಲವು ವಿದ್ವಾಂಸ ಅಭಿಪ್ರಾಯವಾಗಿದೆ. ದಖ್ಖನ್ ಶೈಲಿಯಲ್ಲಿ 'ರಾಗಮಾಲಾ' ಚಿತ್ರಗಳು ನಿರ್ಮಿಸಿದುದು ಚಿತ್ರ ಪ್ರಪಚಂದಲ್ಲಿ ಹೊಸ ಅಧ್ಯಯದ ಪ್ರಾರಂಭವೆನ್ನಬಹುದು. "ನುಜುಮ್–ಉಲ್–ಉಲ್ಮ್" (Najum-ul-ulum) ಎಂಬ ಬೃಹದ್ ಗ್ರಂಥದಲ್ಲಿ ನೂರಾರು ಚಿತ್ರಗಳನ್ನು ರಚಿಸಿದ್ದಾರೆ.

ಯೂಸುಫ್ ಆದಿಲ್‌ಷಹ ವಿಜಾಪುರ ಚಿತ್ರಕಲೆಯನ್ನು ಮೊದಲನೆಯ ಹಂತವೆಂದು ಎರಡನೆಯ ಇಬ್ರಾಹಿಮ್‌ನ ಕಾಲದಲ್ಲಿ ತನ್ನ ಸ್ವತಂತ್ರ ಶೈಲಿಯನ್ನು ಬೆಳೆಸಿಕೊಂಡಿತು. ಇದನ್ನು ಎರಡನೆಯ ಹಂತವೆಂದು ಹೇಳಬಹುದು. ಮೊಘಲರು ದಖನಿನಲ್ಲಿ ರಾಜಕೀಯವಾಗಿ ಪ್ರಬಲರಾದಂತೆ ಬಿಜಾಪುರ ಚಿತ್ರಕಲೆಯಲ್ಲಿ ಮೊಘಲರ ಚಿತ್ರಕಲೆಯ ಪ್ರಭಾವವೂ ಕಾಣಿಸಿಕೊಳ್ಳತೊಡಗಿತು, ಇದನ್ನು ಮೂರನೆಯ ಹಂತವೆನ್ನಲಾಗುತ್ತದೆ. ವಿಜಾಪುರ ಚಿತ್ರಕಲೆಯನ್ನು ಬೇರೆ–ಬೇರೆ ಸುಲ್ತಾನರ ಆಳ್ವಿಕೆಯ ಅವಧಿಯಲ್ಲಿ ಹಂತ–ಹಂತವಾಗಿ ಬದಲಾವಣೆಯನ್ನು ಹೊಂದಿರುವುದನ್ನು ನಾವು ಗಮನಿಸಬಹುದು. ಈ ಚಿತ್ರಕಲೆಯಲ್ಲಿ ಮೊಘಲರ ಚಿತ್ರಕಲೆಯ ಪ್ರಭಾವವು ಕಾಣಿಸಿಕೊಳ್ಳತೊಡಗಿತು. ಇಲ್ಲಿ ಅಸಂಖ್ಯಾತ ಕಲಾವಿದರಿದ್ದರು, ದೇಶ–ವಿದೇಶಗಳ ಕಲಾವಿದರು ಇಲ್ಲಿ ಆಶ್ರಯ ಪಡೆದಿದ್ದರು. ಹಸ್ತಪ್ರತಿ ಚಿತ್ರಗಳು, ಕಿರುಚಿತ್ರಗಳು, ಭಾವಚಿತ್ರಗಳು, ರಾಗಮಾಲಿಕಾ ಚಿತ್ರಗಳು, ಭಿತ್ತಿಚಿತ್ರಗಳು, ಲೋಹ, ಬಟ್ಟೆ, ಸುಂದರ ಅಲಂಕಾರಿಕ ಬರಹ ಚಿತ್ರಗಳಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.

## ರಾಗ ಮಾಲಾ ಚಿತ್ರಕಲೆ :

ರಾಗಮಾಲಾ ಗೀತೆಗಳಲ್ಲಿಯ ರಾಗಗಳಿಗೆ ರೂಪಲಾವಣ್ಯಗಳು, ಗುಣಲಕ್ಷಣಗಳನ್ನು ಬಣ್ಣಭಾವಗಳು ಇತ್ಯಾದಿಗಳ ವರ್ಣನೆಯೂ ಇದ್ದು, ಅವುಗಳನ್ನು ಅನುಸರಿಸಿ ಕಲಾಕೃತಿಗಳು ರಚಿತವಾಗುತ್ತಿದ್ದವು. ಅಂತೆಯೇ ವಿವಿಧಗೀತೆಗಳ ಹಾಡುವಿಕೆಗೆ ಪೂರಕವಾಗಿ ರಾಗಗಳನ್ನು ಸೂಚಿಸಲಾಗುತ್ತಿತ್ತು.

ಪ್ರತಿಯೊಂದು ರಾಗವೂ ನವರಸಗಳಲ್ಲಿಯ ಒಂದೊಂದು ರಸವನ್ನು ಪ್ರತಿನಿಧಿಸುತ್ತವೆ. ಬಹುತೇಕ ರಾಗಗಳು ಶೃಂಗಾರ ರಸ ಪ್ರಾಧಾನ್ಯವಾಗಿದ್ದರೂ ಕೆಲವು ರಾಗಗಳು ಶೋಕ, ಆರ್ತ, ಭಕ್ತಿ, ದೈನ್ಯಭಾವಳಿಗೂ ಪ್ರಾಮುಖ್ಯತೆ ನೀಡುತ್ತವೆ. ಅವುಗಳಲ್ಲಿ ಅಸಾವರಿ ರಾಗ, ರಾಗಿನಿ ರಾಮಕರಿ, ಬೈರವರಾಗ, ಕಲ್ಯಾಣಿರಾಗ, ಕಾನಡಾರಾಗ, ಕೇದಾರ ರಾಗ, ಇನ್ನು ಸಾಕಷ್ಟು ರಾಗಮಾಲಾ ಚಿತ್ರಕಲೆಗೆ ಉದಾಹರಣೆಗಳಿವೆ. ದಕ್ಷಿಣದಲ್ಲಿ ಮೊಘಲ ಸೈನ್ಯದ ಜೊತೆಗಿದ್ದ ಬಿಕಾನೀರ್‌ನ ರಾಜಾ ಅನುಪಸಿಂಗನನ್ನು ಬಿಜಾಪುರದ ಗವರ್ನರನಾಗಿ ನೇಮಕ ಮಾಡಿದ್ದ, ಆ ಸಂದರ್ಭದಲ್ಲಿ ಅನೇಕ ರಾಗ ಮಾಲಾ ಚಿತ್ರಗಳನ್ನು ತನ್ನ ಜೊತೆಗೆ ತೆಗೆದುಕೊಂಡು ಹೋದನು. ಕೆಲವು ಬಿಕಾನೇರಿನ ಸಂಗ್ರಹಾಲಯ ಇನ್ನೂ ಕೆಲವು ದೆಹಲಿಯ ನ್ಯಾಸಲ್ ಮುಸಿಯಂನಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಸಂಗ್ರಹಿಸಿಟ್ಟಿದ್ದಾರೆ.

## ಹಸ್ತಪ್ರತಿ ಚಿತ್ರಕಲೆ :

ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ಶ್ರೇಷ್ಠ ಸಂಗೀತಗಾರನು, ರಾಗಸಂಯೋಜಕನು ಆಗಿದ್ದನು. ಇವರ ಕಾಲದಲ್ಲಿ "ರಾಗಮಾಲಿಕೆ" ಚಿತ್ರಕಲೆ ಬೆಳೆಯಲು ಪ್ರೋತ್ಸಾಹ ದೊರೆಯಿತು. ಬಿಜಾಪುರ ಚಿತ್ರಕಲೆ ಒಂದು ಹೊಸ ಹಂತ ಪ್ರವೇಶಿತು. ಆದಿಲ್‌ಶಾಹಿ ಅರಸು ಮನೆತನದ ಕೆಲವು ಸುಲ್ತಾನರು ಹಸ್ತಪ್ರತಿಗಳಲ್ಲಿ ಚಿತ್ರಕಲೆಯನ್ನು ಬೆಳೆಸಿಕೊಂಡು ಬಂದರು. ನುಜುಮ್–ಉಲ್–ಉಲೂಮ್ ಮೊದಲನೆಯ ಅಲಿ ಆದಿಲಷಾಹನ ಕಾಲದಲ್ಲಿ ರಚಿಸಲಾಗಿದೆ. ಇದು ನಕ್ಷತ್ರ ಶಾಸ್ತ್ರದ, ಜ್ಯೋತಿಷ್ಯ ಮತ್ತು ಮಾಂತ್ರಿಕತೆ ವಿಜ್ಞಾನದ ಕುರಿತಾಗಿದೆ. ಸಾಂದರ್ಭಿಕವಾಗಿ ಕೆಲವು ಕಿರುಗಾತ್ರದ ೮೭೬ ಚಿತ್ರಗಳಿವೆ. ಅ.ಲ. ನರಸಿಂಹನ್‌ರವರು ಮುಸ್ಲಿಮ್ ಹಸ್ತಪ್ರತಿಗಳು ಚಿತ್ರಕಲೆ ಲೇಖನದಲ್ಲಿ ಪರ್ಷಿಯನ್ ಹಾಗೂ ಭಾರತೀಯ ಸಮ್ಮಿಶ್ರಣದ ಶೈಲಿ ಇದಾಗಿದೆ ಎಂದಿದ್ದಾರೆ. ಕ್ರಿ.ಶ. ೧೫೭೦ ರಲ್ಲಿ ರಚಿತವಾದ ನಜುಮ್–ಅಲ್–ಉಲ್ಮ್ (ಖಗೋಳದ ನಕ್ಷೆಗಳು) ತದಿಕರಾತ–ಉಲ್–ಮುಲ್ಕ್ "ಕಿತಾಬೆ–ಇ–ನವರಸ" ಹಸ್ತಪ್ರತಿಗಳು ಪ್ರಮುಖವಾಗಿವೆ. ಇವೆಲ್ಲಾ ಹಸ್ತಪ್ರತಿಗಳು ಇಂಗ್ಲೇಂಡದ ಡಬ್ಲಿನ್ ಚೇಸ್ಟರ್ ಬೆಟ್ಲೆ ಲೈಬ್ರರಿ, ಲಂಡನ್ನಿನ ಬ್ರಿಟಿಷ್ ಲೈಬ್ರರಿ, ಜೈಪುರದ ಸಿಟಿ ಪ್ಯಾಲೆಸ್ ಮ್ಯೂಜಿಯಂ, ಬಿಜಾಪುರದ ವಸ್ತು ಸಂಗ್ರಹಾಲಯ ಹಾಗೂ ಸಾಲರಜಂಗ ಮ್ಯೂಜಿಯಂನಲ್ಲಿ ಇವರ ಆಳ್ವಿಕೆಯ ಕಾಲದಲ್ಲಿ ರಚಿಸಿದ ಹಸ್ತಪ್ರತಿಗಳನ್ನು ನೋಡಬಹುದಾಗಿದೆ. ಕಿತಾಬೆ–ಇ–ನವರಸ ಇದು ಸಂಗೀತ ಮತ್ತು ಚಿತ್ರಕಲೆಗಳಿಗೆ ಸಂಬಂಧಿಸಿದ ಗ್ರಂಥವಾಗಿದೆ. ಸರಸ್ವತಿ ಸ್ತುತಿಯೊಂದಿಗೆ ಕಾವ್ಯ ಆರಂಭವಾಗುತ್ತದೆ. ಮುಂದಿನ ಗೀತೆಗಳಲ್ಲಿ ಗಣಪತಿ, ಇಂದ್ರ, ಶಿವ, ಪಾರ್ವತಿಯ ಸ್ತುತಿ ಇದೆ. ಸರಸ್ವತಿ ತನ್ನ ತಾಯಿ, ಗಣಪತಿ ತನ್ನ ತಂದೆಯೆಂದೂ ಇಬ್ರಾಹಿಮ್ ಒಂದೆಡೆ ಹೇಳುತ್ತಾನೆ. ಪರ್ಷಿಯಾ ದೇಶದ ಅಬ್ದುಲ್ ಲತಿಫ್‌ಮುಸ್ತಫಾನು ಪ್ರಸಿದ್ಧ ಸುಂದರ ಅಕ್ಷರ ಬರಹಗಾರನಾಗಿದ್ದನು.

ಕಿತಾಬೆ–ಇ–ನೌವರಸ ಹಸ್ತಪ್ರತಿಯನ್ನು ನಕ್ಷ ಮತ್ತು ಸೂಲ ಶೈಲಿಗಳಲ್ಲಿ ಬರೆದಿದ್ದಾರೆ. ಜವಹೀರ್–ಅಲ್–ಮುಶಿಕತ್–ಇ–ಅಹಮ್ಮದಿ ಸಂಗೀತ ಶಾಸ್ತ್ರದ ಗ್ರಂಥವಾಗಿದೆ. ಒಟ್ಟು ೨೧೪ ಪುಟಗಳು ೪೮ ಚಿಕಣಿ ಚಿತ್ರಗಳಿವೆ. ಪ್ರತಿ ಸ್ವರಕ್ಕೂ ಒಬ್ಬ ಪುರುಷನನ್ನು ಆಯಾ ಸ್ವರಕ್ಕೆ ಎಷ್ಟು ಕೃತಿಗಳು ಇರುತ್ತವೆಯೋ ಅಷ್ಟು ಸಂಖ್ಯೆಯಲ್ಲಿ ಸ್ತ್ರೀಯರನ್ನು ಚಿತ್ರಿಸಿದೆ. ವೃಷಭಕ್ಕೆ ಬಣ್ಣ–ಬಣ್ಣದ ಕೋಗಿಲೆ, ಗಾಂಧಾರಕ್ಕೆ ಕುರಿ, 'ಶೆಡ್ಜಕ್ಕೆ' ಕೊಕ್ಕಿನಲ್ಲಿ ಹಾವು ಹಿಡಿದ ನವಿಲನ್ನು, ಮದ್ಯಮಕ್ಕೆ ಕ್ರೌಂಚ, ದೈವತ್ವಕ್ಕೆ ಕಪ್ಪೆ, ನಿಷಾದಕ್ಕೆ ಆನೆ ಇತ್ಯಾದಿಗಳನ್ನು ಸ್ವರಕ್ಕೆ ಪ್ರತಿನಿಧಿಸುವ ಸಾಂಪ್ರದಾಯಿಕ ಪ್ರಾಣಿ ಅಥವಾ ಪಕ್ಷಿಗಳನ್ನು ಒಂದನೇ ಭಾಗದಲ್ಲಿ ಚಿತ್ರಿಸಲಾಗಿದೆ. ಬೈರವ ರಾಗಕ್ಕೆ ಶಿವಲಿಂಗ ಪೂಜಿಸುವ ಸ್ತ್ರೀ, ಸೈಂಧವಿರಾಗಿಣಿ ಒಂದು ಕೈಯಲ್ಲಿ ತ್ರಿಶೂಲ ಹಾಗೂ ಇನ್ನೊಂದುರಲ್ಲಿ ಕತ್ತರಿಸಿದ ಶಿರೋಭಾಗ ಇರಿಸಿಕೊಂಡಿರುವಂತೆ, ತೋಟದಲ್ಲಿರುವ ವಂಸತರಾಗಿಣಿ ಎರಡು ಸರ್ಪಗಳೊಂದಿಗೆ ಆಡುತ್ತಿರುವ ಅಸಾವರಿ ರಾಗಿಣಿ ಇತ್ಯಾದಿಗಳನ್ನು ಎರಡನೆಯ ಭಾಗದಲ್ಲಿದ್ದರೆ, ಭಾರತನಾಟ್ಯ ಶಾಸ್ತ್ರದ ೨೪ ಕರಣಗಳನ್ನು ನೆನಪಿಸುವಂತೆ ರೂಪಿಸಿದೆ. ಕೈಗಳ ಹಾವಭಾವಗಳ ನರ್ತನ ಭಂಗಿ ಹಾಗೂ ಕಚ್ಚೆಹಾಕಿ ದೋತಿ ಉಟ್ಟಿರುವ ನೃತ್ಯಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು ನೋಡಬಹುದಾಗಿದೆ. 'ಸಂಗೀತ ರತ್ನಾಕರ' ನಾಲ್ಕು ಕಿರುಚಿತ್ರಗಳಿದ್ದು, ದರ್ಬಾರಿನಲ್ಲಿ ನೃತ್ಯ ಮಾಡುತ್ತಿರುವ ದೃಶ್ಯ ಗಮನ ಸೆಳೆಯುತ್ತವೆ. ಭಾರತೀಯ ಶೈಲಿಯ ಉಡುಪುಗಳನ್ನು ತೋರಿಸಲಾಗಿದೆ. ಸುಲ್ತಾನನು ಬಿಗಿಯಾದ ಪೈಜಮ್ ಮತ್ತು ಉದ್ದನೆಯ ಜಾಮ್ ಧರಿಸಿರುವನು ಹಾಗೇ ಅವರು

ಗಡ್ಡಧಾರಿಯಾಗಿದ್ದು ವಿವಿಧ ಆಭರಣಗಳನ್ನು ಧರಿಸಿರುವುದನ್ನು ಸುಂದರವಾಗಿ ಚಿತ್ರಿಸಲಾಗಿದೆ. ಜ್ಯೋತಿಷ್ಯ ಹಸ್ತಪ್ರತಿ ಚಿತ್ರಗಳು ಜಾನಪದ ಶೈಲಿಯಲ್ಲಿವೆ. ಜ್ಯೋತಿಷ್ಯ ಯಂತ್ರಗಳನ್ನು ಹೋಲುವ ನಕ್ಷಗಳಿವೆ. ಆನೆ, ಒಂಟೆ, ಕುದುರೆ, ಪಲ್ಲಕ್ಕಿ, ಸವಾರರು ಹೀಗೆ ಅನೇಕ ಚಿತ್ರಗಳನ್ನು ಚಿತ್ರಿಸಲಾಗಿದೆ. ಹಾಗೇಯೆ ಅಜ್ ಇಬೂಲ್–ಮುಖಲುಖ್ತ, ರತನ ಕಲಿಯಾ, ನಿಮ್‌ತ್ ನಾಮಾ (ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯ), ಖವ್ವರನಾಮಾ (ಲಂಡನ್ನಿನ ವಾಚನಾಲಯದಲ್ಲಿದೆ), ದಿವಾನ್–ಇ–ಉರ್ಫ (ಅಮೇರಿಕಾ ಪ್ರಾಗ್ ಆರ್ಟ್ ಮ್ಯುಸಿಯಂ), ಜವಹೀರ್–ಆಲ್–ಮುಶಿಕತ್–ಇ–ಮಹಮ್ಮದಿ ಸಂಗೀತ ಶಾಸ್ತ್ರದ ಗ್ರಂಥವಾಗಿದೆ. ಲಂಡನ್‌ನ ಬ್ರಿಟಿಷ್ ಲೈಬ್ರರಿ ಇನ್ನು ಸಾಕಷ್ಟು ಹಸ್ತಪ್ರತಿಗಳು ರಚನೆಯಾಗಿರುವುದು ನೋಡಬಹುದಾಗಿದೆ.

### ಭಾವಚಿತ್ರಗಳು :

ಭಾವಚಿತ್ರ ರಚನೆಯ ಒಂದು ನಿಶ್ಚಿತರೂಪ ದಖ್ಖನಿ ಮತ್ತು ಮೊಘಲ್ ಚಿಕಣಿ ಚಿತ್ರಗಳಲ್ಲಿ ಕಾಣಬಹುದು. ಬಿಜಾಪುರ ಚಿತ್ರಕಲಾ ಶೈಲಿಯ ಚಿತ್ರಗಳು ದೇಶ–ವಿದೇಶಗಳ ಕಲಾ ಸಂಗ್ರಹಾಲಯಗಳಲ್ಲಿ ದೊರೆಯುತ್ತವೆ. ಎದುರಿಗೆ ಕುಳ್ಳರಿಸಿಕೊಂಡು ಚಿತ್ರಿಸುವುದೇ ಭಾವಚಿತ್ರಗಳು. ಈ ಅವಧಿಯ ಅನೇಕ ಭಾವಚಿತ್ರಗಳು ಆಕ್ಸಫರ್ಡ, ಲಂಡನ್, ಫ್ರಾನ್ಸ್, ನ್ಯೂಯಾರ್ಕ್ ವಸ್ತು ಸಂಗ್ರಹಾಲಯದಲ್ಲಿ ನೋಡಲು ಸಿಗುತ್ತವೆ. ೧) ೨ನೇ ಇಬ್ರಾಹಿಮ್‌ನ ಮೆರವಣಿಗೆಯ ದೃಶ್ಯ, ೨) ಮೊಹಮ್ಮದ್ ಆದಿಲ್‌ಶಾಹ ಭಾವಚಿತ್ರ, ೩) ಹಾಸಿಗೆಯ ಮೇಲೆ ಹುಕ್ಕವನು ಸೇದುತ್ತಿರುವ ಮೊಹಮ್ಮದ್ ಶಾಹ, ೪) ೨ನೇ ಆದಿಲ್‌ಶಾಹ ದರಬಾರ್ ೫) ೨ನೇ ಆದಿಲ್‌ಶಾಹನ ಭೇಟೆಯಾಡುತ್ತಿರುವುದು, ೬) ಬಾಲಕ ೩ನೆಯ ಇಬ್ರಾಹಿಮ್ ೭) ಚಾಂದಬೀಬಿಯ ಭಾವಚಿತ್ರ ೮) ಕುದುರೆ ಸವಾರಿ ಮಾಡುತ್ತಿರುವ ಚಾಂದಬೀಬಿಯ ಭಾವಚಿತ್ರ ೯) ಎಡರನೆಯ ಇಬ್ರಾಹಿಮ್ ತಂಬೂರಿ ನುಡಿಸುತ್ತಿರುವ ಚಿತ್ರ ೧೦) ಯೋಗಿನಿಯ ಚಿತ್ರ ೧೧) ಆನೆಯ ಮೇಲೆ ಸವಾರಿ ಮಾಡುತ್ತಿರುವ ಎರಡನೆಯ ಇಬ್ರಾಹಿಮ್ ಇನ್ನೂ ಅನೇಕ ಭಾವ ಚಿತ್ರಗಳಿವೆ. ಇಬ್ರಾಹಿಮ್‌ನು ಶ್ರೇಷ್ಠ ಕಲಾವಿದರಿಂದ ತನ್ನ ಭಾವಚಿತ್ರಗಳನ್ನು ಬರೆಯಿಸಿಕೊಂಡಿದ್ದಾನೆ. ಉದಾ: ಒಂದು ಚಿತ್ರವು ಆನೆಯ ಮೇಲೆ ಕುಳಿತ ಚಿತ್ರವಿದ್ದು, ಇದರಲ್ಲಿ ವಿಶಾಲ ಹುಲ್ಲುಗಾವಲು, ಆಕಾಶ, ಗಿಡಮರ ಮುಂತಾದ ನಿಸರ್ಗದ ಸೌಂದರ್ಯ, ಪಕ್ಕದಲ್ಲಿ ಗಡ್ಡವಿಲ್ಲದ ತರುಣ ಕುಳಿತ ಚಿತ್ರ, ಮತ್ತೊಂದು ಚಿತ್ರದಲ್ಲಿ ಇಬ್ರಾಹಿಮನು ರಾಜೋಚಿತ ಉಡುಗೆಯಲ್ಲಿ ಮರಗಿಡ, ಹೂಬಳ್ಳಿಗಳ ಮಧ್ಯೆ ಚಿತ್ರವು ತುಂಬ ಸೊಗಸಾಗಿರುವುದು ನೋಡಬಹುದು. ಎರಡನೇಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಇಂತಹ ಭಾವಚಿತ್ರ ರಚನೆ ಪ್ರಾರಂಭವನ್ನು ನೋಡಬಹುದಾಗಿದೆ.

### ಭಿತ್ತಿ ಚಿತ್ರಕಲೆ :

ಅಸರ್‌ಮಹಲ್ ಎರಡು ಅಂತಸ್ತುಗಳ್ಳ ವಿಶಾಲವಾದ ಕಟ್ಟವಾಗಿದ್ದು, ಮಹಮದ್ ಆದಿಲ್‌ಶಾಹಿನಿಂದ ಕ್ರಿ.ಶ. ೧೬೪೬ ರಲ್ಲಿ ನಿರ್ಮಿಸಿ ಇದರಲ್ಲಿ ಭಿತ್ತಿಚಿತ್ರಗಳನ್ನು ಬರೆಸಲಾಗಿದೆ. ಮೇಲಿನ ಮಹಡಿಯಲ್ಲಿ ಎರಡು ಕೋಣೆಗಳಲ್ಲಿ ಮತ್ತು ಹಜಾರದಲ್ಲಿ ಭಿತ್ತಿ ಚಿತ್ರಗಳನ್ನು ಚಿತ್ರಿಸಲಾಗಿದೆ. ಗೋಡೆಯ ಮೇಲ್ಭಾಗದಲ್ಲಿ ಹೂ, ಎಲೆ, ಹಣ್ಣು, ಕಾಯಿಗಳನ್ನು ನೀಲಿ ವರ್ಣದಲ್ಲಿ ಚಿತ್ರಿಸಲಾಗಿದೆ, ಗೋಡೆಯ ಕೆಳಭಾಗದಲ್ಲಿ ಹೂ, ಬಳ್ಳಿ ನಕ್ಷೆ, ಸಾಲಾಗಿ ವ್ಯಕ್ತಿ ಚಿತ್ರಣಗಳನ್ನು ರಚಿಸಲಾಗಿದೆ. ಮಗುವನ್ನು ತೂಗುತ್ತಿರುವ ಚಿತ್ರದಲ್ಲಿ ಮಹಿಳೆಯರು ಬೆಲೆಬಾಳುವ ವಸ್ತ್ರಾಭರಣಗಳನ್ನು ಧರಿಸಿ, ಮಗುವಿಗೆ ಕಾಲಿನಲ್ಲಿ ಗೆಜ್ಜೆ, ಕೈಯಲ್ಲಿ ಕಂಕಣ ಮುಂತಾದ ಆಭರಣಗಳನ್ನು ಚಿತ್ರಿಸಲಾಗಿದೆ. ಧರಿಸಿರುವ ಬಟ್ಟೆಯಲ್ಲಿನ ನೆರಿಗೆಗಳು, ನೆರಳು, ಬೆಳಕು ಸಂಯೋಜನೆಯೊಂದಿಗೆ ಅದ್ಭುತವಾಗಿದೆ. ಇನ್ನೂ ಮಾಡುಗಳಲ್ಲಿನ ಹೂ ಕುಂಡಗಳನ್ನು ಜ್ಯಾಮಿತಿಕ ರೂಪಗಳಿಂದ ಅಲಂಕರಿಸಿ, ಹೂವುಗಳಿಗೆ, ಎಲೆಗಳಿಗೆ ಬಂಗಾರ ಮತ್ತು ಬೆಳ್ಳಿಯ ವರ್ಣಗಳನ್ನು ಬಳಸಲಾಗಿದೆ.

ಕುಮಟಗಿಯ ಜಲವಿಹಾರದ ವಿಶ್ರಾಂತಿ ಗೃಹವು ವಿಜಾಪುರದಿಂದ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ಇಬ್ರಾಹಿಮ್ ಆದಿಲ್‌ಶಹಾ ವಿಜಾಪುರದ ಸುಲ್ತಾನನಾಗಿದ್ದ ವೇಳೆ ಈ ಊರಲ್ಲಿ ಕೃತಕ ಸರೋವರನ್ನು ಕಟ್ಟಿಸಿದ. ಈ ಸ್ಥಳವು ಸುಲ್ತಾನರ ಬೇಸಿಗೆ ತಂಗುದಾಣವಾಗಿತ್ತಲ್ಲದೇ ಯುರೋಪಿಯನ್ ಗಣ್ಯವ್ಯಕ್ತಿಗಳು ರಾಜಧಾನಿಗೆ

ಭೇಟಿಕೊಟ್ಟಾಗ ಇಲ್ಲಿಯೇ ತಂಗುವ ವ್ಯವಸ್ಥೆ ಮಾಡಲಾಗುತ್ತಿತ್ತು. ಈ ಕಟ್ಟಡದ ಒಳಗಿನ ಕಮಾನು ಗೋಡೆಗಳು ಮತ್ತು ಮೇಲ್ಛಾವಣೆಯ ಎಲ್ಲ ಭಾಗಗಳು ವರ್ಣಚಿತ್ರಗಳಿಂದ ಅಲಂಕರಿಸಲಾಗಿತ್ತು. ಆದರೆ ಇಂದು ಎಲ್ಲ ಚಿತ್ರಗಳು ನಾಶವಾಗಿವೆ. ಸಂತನೊಬ್ಬ ರಾಜನೊಡನೆ ವಿಚಾರವಿನಿಮಯ ನಡೆಸುತ್ತಿರುವ ಚಿತ್ರಮಾತ್ರ ಮಾಸುಕಾಗಿ ಉಳಿದಿದೆ. ಇಲ್ಲಿಯ ವರ್ಣ ವಿನ್ಯಾಸ, ರಚನಾಶೈಲಿ ಯುರೋಪ ಪ್ರಭಾವಕ್ಕೆ ಒಳಗಾಗಿದ್ದು ಹಾಗೂ ಚಿತ್ರಗಳಿಗೆ ನಸುಕೆಂಪು, ಕಪ್ಪು ಬೂದುವರ್ಣಗಳ ಛಾಯೆ ಹೆಚ್ಚಾಗಿ ಕಂಡುಬರುತ್ತದೆ. ಬಿಜಾಪುರದ ಜುಮ್ಮಾ ಮಸೀದಿ ಕಮಾನುಗಳಲ್ಲಿ ಬಳ್ಳಿಯಾಕಾರದ ಹಾಗೂ ಜಾಮಿತಿಯ ಸುಂದರ ನಕ್ಷೆಗಳನ್ನು ಚಿತ್ರಿಸಲಾಗಿದೆ. ಚಿತ್ರಕಲೆಯ ಇತಿಹಾಸ ದೃಷ್ಟಿಯಿಂದ ಅಲಿ ಆದಿಲ್–ಖಾನನ ಪತ್ನಿಯಾದ ಚಾಂದಬೀಬಿ ತುಂಬಾ ಪ್ರಸಿದ್ಧಿ ಪಡೆದ ಮಹಿಳೆಯಾಗಿದ್ದಾಳೆ. ಸಾತ್ ಮಂಜಿಲ್ ೫೦–೬೦ ವರ್ಷಗಳ ಹಿಂದೆ ಇಲ್ಲಿ ಸಹ ಸಾಕಷ್ಟು ಭಿತ್ತಿ ಚಿತ್ರಗಳಿದ್ದವು ಎಂಬುದು ಸ್ಥಳೀಯರ ಮಾಹಿತಿಯಿಂದ ತಿಳಿದುಬರುತ್ತದೆ, ಆದರೆ ಪ್ರಸ್ತುತ ಈಗ ಯಾವುದೇ ಬಿತ್ತಿ ಚಿತ್ರಗಳು ಇಲ್ಲ. ಮಹಮ್ಮದ ಆದಿಲ್‌ಶಾಹಿ ಅರಸರ ಕಾಲದಲ್ಲಿ ಗೋವಾದಿಂದ ಕ್ರೈಸ್ತ ಧರ್ಮ ಗುರುವಿಗೆ ರಾಜಧಾನಿಯಲ್ಲಿ ಬಂದು ನೆಲೆಸಲು ಅವಕಾಶ ನೀಡಿದ್ದ. ಆನಂದ ಮಹಲ್ ಮತ್ತು ಗಗನಮಹಲ್ ಮಧ್ಯದಲ್ಲಿ ಒಂದು ಚರ್ಚ ಕಟ್ಟಿಸಲು ಅನುಮತಿ ನೀಡಿದ್ದನು ಇಲ್ಲಿಯೂ ಸಹ ಸುಂದರವಾದ ಭಿತ್ತಿ ಚಿತ್ರಗಳನ್ನು ರಚಿಸಿರುವುದನ್ನು ನಾವು ನೋಡಬಹುದು ಇಲ್ಲಿ ಬಂಗಾರದ ವರ್ಣವನ್ನು ಬಳಸಿ ಸುಂದರವಾದ ಬಿತ್ತಿಚಿತ್ರಗಳು ನಿರ್ಮಾಣವಾಗಿವೆ.

### ಬಿತ್ತಿ ಚಿತ್ರಗಳ ಪ್ರಮುಖ ಲಕ್ಷಣಗಳು:

೧) ಪ್ರತಿಗೋಡೆಯಲ್ಲಿ ನೆಲದಿಂದ ೪ ಅಥವಾ ೫ ಫೂಟು ಅಂತರದ ಒಳಗೆ ವ್ಯಕ್ತಿ ಚಿತ್ರಗಳನ್ನು ರಚಿಸಲಾಗಿದೆ.
೨) ಹೂಗಿಡಗಳುಳ್ಳ ಕುಂಡಗಳನ್ನು ಮಾಡುಗಳಲ್ಲಿ ರಚಿಸಿ, ಹೂಬಳ್ಳಿಯನ್ನು ಗೋಡೆಯ ಮೇಲೆ ರಚಿಸಲಾಗಿದೆ.
೩) ವ್ಯಕ್ತಿಚಿತ್ರಗಳು ದಷ್ಟಪುಷ್ಟವಾದ ದುಂಡಾದ ಮೈಕಟ್ಟನ್ನು ಹೊಂದಿವೆಯಲ್ಲದೇ ಪಾರದರ್ಶಕವಾದ ವಿವಿಧ ನಕ್ಷೆಗಳಿಂದ ಕೂಡಿದ ಸುಂದರ ಉಡುಪುಗಳನ್ನು ರಚಿಸಲಾಗಿದೆ.
೪) ಹೂಬಳ್ಳಿ ಚಿತ್ರಗಳಲ್ಲಿ ನೀಲಿವರ್ಣ ಅಧಿಕವಾಗಿ ಬಳಸಿದ್ದಾರೆ. ವ್ಯಕ್ತಿ ಚಿತ್ರಗಳಲ್ಲಿ ಕೆಂಪುವರ್ಣವನ್ನು ಹೆಚ್ಚಾಗಿ ಬಳಸಿದ್ದಾರೆ.

### ಅಲಂಕಾರಿಕ ಬರಹ :

ಶಿಲ್ಪಕಲೆಯು ಇಸ್ಲಾಮಿಕ್ ಶೈಲಿಯ ಒಂದು ಸುಂದರವಾದ ಅಂಗವಾಗಿದೆ. ಇವು ರೇಖಾಚಿತ್ರಕಲೆಯ ಮಾದರಿಯಾಗಿವೆ, ಅಲ್ಲದೆ ಅಲಂಕಾರ ಬರಹದ ಕಲೆಯ ವಿವಿಧ ಶೈಲಿಗಳಲ್ಲಿ ಬಹು ಸುಂದರವಾಗಿ ಬೆಳೆದುಕೊಂಡು ಬಂದಿದೆ. ಈ ದೃಷ್ಟಿಯಲ್ಲಿ ಪರ್ಷಿಯನ್ ಅಲಂಕಾರಕ್ಷರ ಬರಹವೆಂದರೆ ಸುಂದರವಾದ ಕೈಬರಹ ಅದು ವಿವಿಧ ವಿನ್ಯಾಸ ಮತ್ತು ಶೈಲಿಗಳಿಂದ ಕಲ್ಮಾತಕವಾಗಿತ್ತು ಸೂಲೂಸ್, ಶಿಕಸ್ತಾ, ತುಲುಪ್ತ, ನಸ್ತಾಲಿಕ್, ಖತ್–ಎ–ಜುಲ್ಬಿ ಹುಲಿಗೆರೆಗಳು ಬಲದಿಂದ ಎಡಕ್ಕೆ ಬರೆಯುವ ಫಾರಸೀ ಅಕ್ಷರ ಮಾಲೆಯ ಸುಂದರ ವಿನ್ಯಾಸಕ್ಕೆ ಮೆರುಗು ನೀಡುತ್ತದೆ. ಪರಿಣಿತನು ರೂಪಿಸಿದ ಅಕ್ಷರ ವಿನ್ಯಾಸ ಚಿತ್ರಕಲೆಯಷ್ಟೆ ಆಕರ್ಷವಾಗಿರುತ್ತದೆ. ಈ ಅಕ್ಷರಗಳನ್ನು ಬರೆಯಲು ಬಿದಿರಿನ ದಪ್ಪ ಲೇಖನಿ ಮತ್ತು ಕರಿ ಇಲ್ಲವೆ ನಾಸಿ ಪುಡಿಯ ಮಸಿಯನ್ನು ಬಳಸುತ್ತಿದ್ದರು. ಅಕ್ಷರಗಳ ಆಕರ್ಷಣೆಯನ್ನು ಇನ್ನೊಷ್ಟು ಹೆಚ್ಚಿಸಲು ಬಂಗಾರ, ಬೆಳ್ಳಿ ಗಿಲೀಟನ್ನು ಉಪಯೋಗಿಸಿರುವುದು ನೋಡಬಹುದು. ಈ ಕಲೆಯಲ್ಲಿ ನಿಪುಣರಾದ ವ್ಯಕ್ತಿಗೆ 'ಖಾಸನವೀಸ್' ಹೆಸರಿನಿಂದ ಗುರುತಿಸಿ ಅವರಿಗೆ ತುಂಬ ಗೌರವವನ್ನು ನೀಡುತ್ತಿದ್ದರು.

### ಗಂಜೀಫಾ ಚಿತ್ರಕಲೆ :

ಗಂಜೀಫಾ ಎಲೆಗಳ ಚಿತ್ರರಚನೆಯಲ್ಲಿ ಸೈನ್ಯ, ಆಯುಧ, ವಾಹನ, ಪಶು–ಪಕ್ಷಿಗಳು ಚಿತ್ರಿತವಾಗಿ ಹೊಸ ಹೊಸ ಆಟಗಳು ಬೆಳೆದವು, ಗಂಜೀಫಾ ಎಲೆಗಳು ಚೌಕ, ಆಯತ, ಅಂಡಾಕಾರದಲ್ಲೂ ಬಂದವು. ಹಸ್ತಿದಂತ, ಎಲುವು, ಮುತ್ತಿನ ಚಿಪ್ಪು, ಆಮೆಚಿಪ್ಪು, ಗಂಧದ ಕಟ್ಟಿಗೆಗಳಿಂದ ಗಂಜೀಫಾಗಳನ್ನು ತಯಾರಿಸುತ್ತಿದ್ದರು. ಗಂಜೀಫಾ

ಕಲೆ ದೇಶದ ಎಲ್ಲ ಭಾಗಗಳಲ್ಲಿ ಪಸರಿಸಿದೆ. ದಕ್ಷಿಣದ ಅಹಮದನಗರ, ಬಿಜಾಪುರ, ಗೋಲ್ಕೊಂಡ, ಬೀದರ, ಗುಲಬರ್ಗಾ ಸುಲ್ತಾನರ ಕಾಲದಲ್ಲಿ ಚಿಕಣಿ ಚಿತ್ರಕಲೆಗೆ ಪ್ರೋತ್ಸಾಹ ದೊರೆಯಿತು. ಹಿಂದೂ ಪರಂಪರೆ ಮತ್ತು ಮೊಗಲ ಪ್ರಭಾವ ಇಲ್ಲಿಯೂ ಸಂಗಮಗೊಂಡು ಗಂಜೀಫಾ ಕಲೆಯಲ್ಲಿ ವಿಭಿನ್ನ ಶೈಲಿಗಳು ರೂಪುಗೊಂಡವು.

## ಲೋಹ ಮಾಧ್ಯಮ ಹಾಗೂ ಶಾಸನದಲ್ಲಿ ಚಿತ್ರಕಲೆ:

ಇವರು ಉಪಯೋಗಿಸುತ್ತಿದ್ದ ಆಯುದ್ಧಗಳಾದ ಖಡ್ಗಗಳು, ಚೂರಿಗಳು, ಕಠಾರಗಳ ಹಿಂದೆ ಇರುವ ಹಿಡಿಕೆಗಳು ಪ್ರಾಣಿಗಳ ಚಿತ್ರಗಳು ಹಾಗೂ ಕೆಲವು ರೇಖಾಚಿತ್ರಗಳು ತುಂಬಾ ಆಕರ್ಷಕವಾಗಿ ಕೆತ್ತಿದ್ದಾರೆ. ತಮ್ಮ-ತಮ್ಮ ಆಡಳಿತ ಕಾಲಾವಧಿಯಲ್ಲಿ ಹೊರಡಿಸಿ ತಾಮ್ರ, ಬಂಗಾರ, ಬೆಳ್ಳಿ ಲೋಹದ ನಾಣ್ಯಗಳ ಮೇಲೆ ತಮ್ಮ ರಾಜ್ಯದ ಲಾಂಛನ, ಸುಂದರವಾದ ಅಕ್ಷರವಿನ್ಯಾಸ ಬರಹಗಳನ್ನು ಹಾಗೂ ಪ್ರಾಣಿಗಳ ಚಿತ್ರಗಳನ್ನು ಅಲಂಕಾರಿಕವಾಗಿ ಟಂಕಿಸಿದ್ದಾರೆ. ಸ್ಮಾರಕ, ತೋಪು, ಮಿನಾರಗಳು, ಸಮಾಧಿ ಕಟ್ಟಡ, ಕೋಟೆ ಕೊತ್ತಲುಗಳು ಅಲ್ಲದೆ ತಮ್ಮ ದಿನನಿತ್ಯ ಬಳಕೆಯ ಬಂಗಾರ, ಬೆಳ್ಳಿ, ಹಿತ್ತಾಳೆ ಪಾತ್ರೆ ಹಾಗೂ ನಾಣ್ಯಗಳ ಮೇಲೆ ಸುಂದರ ಅಕ್ಷರ ವಿನ್ಯಾಸದಿಂದ ಕೂಡಿರುತ್ತಿದ್ದವು, ಕಲಾಂತರದಲ್ಲಿ ಮುಸ್ಲಿಂ ಅಕ್ಷರ ವಿನ್ಯಾಸದಲ್ಲಿ ಏಳು ಶೈಲಿಗಳು ಕಾಣಿಸಿಕೊಂಡವು. 'ಖುಫಿ' ಶೈಲಿಯು ಕುರಾನ್ ಷರೀಫ ಸಂದೇಶಗಳನ್ನು ಬರೆಯಲು, 'ತುಲುಷ್' ಶೈಲಿಯನ್ನು ಮುಸ್ಲಿಂ ವೀರರ ಹಿರಿಮೆಯನ್ನು ಸಾರುವುದಕ್ಕೆ ಬಳಸಿರುವುದು ನಾವು ನೋಡಬಹುದಾಗಿದೆ.

ಈ ಅರಸರ ಕಾಲದಲ್ಲಿ ಅನೇಕ ಶಾಸನಗಳು ನಗರದ ಕಟ್ಟಡಗಳಲ್ಲಿ, ಕೋಟೆಗಳಲ್ಲಿ ಇಂದೂ ನೋಡಬಹುದು. ಕೆಲವು ಪರ್ಷಿಯನ್ ಶಾಸನಗಳಲ್ಲಿ ಅತ್ಯುತ್ತಮ ಚಿತ್ರಕಲೆಯನ್ನು ಕಾಣಬಹುದು. ರಾಯಚೂರಿನ ಖುಸ್ರೊ ಬುರುಜಿನಲ್ಲಿರುವ ಶಿಲಾಶಾಸನವು (ಸಂಗ್ರಹ: ಹೈದ್ರಾಬಾದಿನ ಮ್ಯುಜಿಯಮ್) ಅಲಂಕಾರಿಕ ಬರವುಳ್ಳ ಒಂದು ಮಾದರಿಯ ಶಾಸನವಾಗಿದೆ. ಇದರ ಮೇಲ್ಮೈಯು ಚೆನ್ನಾಗಿ ತಿಕ್ಕಿದ್ದು, ಇದು ವರ್ಣದಿಂದ ಅಲಂಕೃತವಾಗಿದೆ. ಒಟ್ಟಿನಲ್ಲಿ ವಸ್ತುವೈವಿಧ್ಯ ಮತ್ತು ಶೈಲಿಯ ವೈಶಿಷ್ಟ್ಯ ಇವುಗಳ ದೃಷ್ಟಿಯಿಂದ ಕರ್ನಾಟಕದಲ್ಲಿ ಬಿಜಾಪುರದ ಆದಿಲ್‌ಶಾಹಿಗಳು ಚಿತ್ರಕಲಾ ಪರಂಪರೆಯ ಸಂಪತ್ತು ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ.

## ಉಪಸಂಹಾರ :

ವಿಜಾಪುರದ ಆದಿಲ್‌ಶಾಹಿಗಳು ಕ್ರಿ.ಶ. ೧೪೮೯ ರಿಂದ ೧೬೮೬ ರವರೆಗೆ ಸುಮಾರು ಎರಡು ಶತಮಾನಗಳ ಕಾಲ ಕರ್ನಾಟಕದಲ್ಲಿ ಒಟ್ಟು ಎಂಟು ಸುಲ್ತಾನರು ರಾಜ್ಯವನ್ನು ಆಳಿದ್ದಾರೆ. ಚಿತ್ರಕಲೆಯ ಪ್ರಕಾರಗಳಾದ ಹಸ್ತಪ್ರತಿ ಚಿತ್ರಗಳು, ಕಿರುಚಿತ್ರಗಳು, ಭಾವಚಿತ್ರಗಳು, ರಾಗಮಾಲಿಕಾ ಚಿತ್ರಗಳು, ಭಿತ್ತಿ ಚಿತ್ರಗಳು ಲೋಹ ಮತ್ತು ಬಟ್ಟೆ ಮಾಧ್ಯಮ ಚಿತ್ರಕಲೆಗಳು, ಗಂಜೀಫಾ ಮತ್ತು ಸುಂದರ ಅಲಂಕಾರಿಕ ಬರಹಗಳ ಚಿತ್ರಕಲೆ ಚಿತ್ರಕಲಾ ಇತಿಹಾಸದ ಅಮೂಲ್ಯ ಆಸ್ತಿಗಳಾಗಿವೆ. ಹತ್ತಪ್ರತಿಯ ಬರಹ ಹಾಗೂ ಚಿತ್ರಗಳ ಮುಖಾಂತರ ಆಗಿನ ಕಾಲದ ಬಿಜಾಪುರ ಸಮಕಾಲಿನ ಸಮಾಜ ಹಾಗೂ ಜನಜೀವನ ಮತ್ತು ಚಿತ್ರಕಲೆ ಶೈಲಿಯನ್ನು ತಿಳಿದುಕೊಳ್ಳಬಹುದು. ಸ್ಥಳೀಯವಾಗಿ ಇರುವ ಭಿತ್ತಿ ಚಿತ್ರಗಳು, ಅಸರ್‌ಮಹಲ್, ಕುಮಟಗಿ ಚಿತ್ರಗಳು ಕೆಲವು ಸಂಪೂರ್ಣವಾಗಿ ನಾಶವಾಗಿವೆ. ಸಾತ್‌ಮಂಜಿಲ್‌ನಲ್ಲಿ ೫೦-೬೦ ವರ್ಷಗಳಿಂದ ಸಾಕಷ್ಟು ಭಿತ್ತಿಚಿತ್ರಗಳು ಇದ್ದವೆಂಬುದು ಸ್ಥಳಿಯರು ಹೇಳುತ್ತಾರೆ. ಆದರೆ ಈಗ ಅಲ್ಲಿ ಯಾವುದೇ ಒಂದು ಚಿತ್ರಗಳು ಇರುವ ಕುರುವು ಇರುವುದಿಲ್ಲ. ಅದೇ ರೀತಿಯಾಗಿ ಅಲ್ಪ-ಸ್ವಲ್ಪ ಭಿತ್ತಿಚಿತ್ರಗಳು ಅಸಲ್‌ಮಹಲ್, ಕುಮಟಗಿಯಲ್ಲಿನ ಚಿತ್ರಗಳನ್ನು ಸಂರಕ್ಷಿಸಬೇಕಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ಇವು ಸಹ ಕಣ್ಮರೆಯಾಗುವುದರಲ್ಲಿ ಅನುಮಾನವಿಲ್ಲ.

ಆದಿಲ್‌ಶಾಹಿಗಳ ಕಾಲದಲ್ಲಿ ರಚಿಸಿರುವ ವಾಸ್ತು ಶಿಲ್ಪಕಲೆ, ಚಿತ್ರಕಲೆಗಳು Cultural Study ಹಾಗೂ ಇತಿಹಾಸಕ್ಕೆ ಪ್ರಮುಖ್ಯತೆಯನ್ನು ಹೊಂದಿವೆ. ಚಿತ್ರಕಲೆಗಳಿಗೆ ಆಯುಷ್ಯ ಕಮ್ಮಿಯಿರುವುದರಿಂದ ಇವುಗಳನ್ನು Documentation, ಕ್ಯಾಟ್‌ಲಾಗ್ ಹಾಗೂ ಪುಸ್ತಕಗಳ ರೂಪದಲ್ಲಿ ಇವುಗಳನ್ನು ಸಂಗ್ರಹಿಸಬೇಕು. ಕಲಾ ವಿದ್ಯಾರ್ಥಿಗಳಿಗೆ ಅಂದಿನ ಕಾಲದ ಚಿತ್ರಗಳ ಶೈಲಿ ವಸ್ತು ವಿಷಯ, ಬಣ್ಣಗಳ ಬಳಕೆ ಹೀಗೆ ಇತ್ಯಾದಿಗಳ ಬಗ್ಗೆ

ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಅದೇ ರೀತಿಯಾಗಿ ಇತಿಹಾಸವನ್ನು ಅಧ್ಯಯ ಮಾಡುವ ವಿದ್ಯಾರ್ಥಿಗಳ ಪಠ್ಯ ಪುಸ್ತಕಗಳಲ್ಲಿ ಇಂತಹ ಚಿತ್ರ ಹಾಗೂ ಮಾಹಿತಿಗಳನ್ನು ಮುದ್ರಿಸಿದ್ದಾಗ ಚಿತ್ರಕಲಾ ಇತಿಹಾಸದ ಅಮೂಲ್ಯ ಆಸ್ತಿಗಳಾಗುತ್ತವೆ. ಬಿಜಾಪುರ ಚಿತ್ರಕಲಾ ಶೈಲಿಯೆಂದೆ ಪ್ರತ್ಯೇಕವಾಗಿ ಗುರುತಿಸಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬಹುದಾಗಿದೆ. ಜಾತಿ–ಮತ ಮೀರಿ ಬೆಳೆದ ಡೆಕ್ಕನ್ ಚಿತ್ರಗಳ ಶೈಲಿ ಇದಾಗಿದೆ.

ನಮ್ಮ ಕನ್ನಡ ನಾಡಿನಿಂದ ದೇಶ–ವಿದೇಶಗಳಿಗೆ ತೆಗೆದುಕೊಂಡು ಹೋಗಿರುವ ಚಿತ್ರಗಳಾದ ಹಸ್ತಪ್ರತಿ, ಭಾವಚಿತ್ರಗಳು ನಾವು Google ನಲ್ಲಿ ಸಂಗ್ರಹ ಮಾಡಿ ಅವುಗಳನ್ನು ನೋಡಿ ಅಧ್ಯಯನ ಮಾಡಬೇಕಾಗಿದೆ. ಇವುಗಳನ್ನು ತರಿಸಿ ಇಲ್ಲವೇ ಅವುಗಳ ಪ್ರತಿರೂಪಗಳನ್ನು ಮಾಡಿ ಒಂದು ಪ್ರತ್ಯೇಕ ಚಿತ್ರಕಲಾ ಸಂಗ್ರಹಾಲಯ (ಆರ್ಟ್‌ಗ್ಯಾಲರಿ) ಮಾಡಿ ಚಿತ್ರಕಲಾಭಿಮಾನಿಗಳಿಗೆ ಹಾಗೂ ಸಂಶೋಧಕರಿಗೂ ಅಧ್ಯಯನಕ್ಕೆ ಅನುಕೂಲ ಮಾಡುವ ಜವಾಬ್ದಾರಿ ಸರ್ಕಾರ, ಸಂಘ, ಸಂಸ್ಥೆ, ವಿಶ್ವವಿದ್ಯಾಲಯ, ಪ್ರಾಚ್ಯವಸ್ತು ಇಲಾಖೆಯವರು ಗಮನಹರಿಸಬೇಕಾಗಿದೆ. ಅಳಿದ ಉಳಿದ ಚಿತ್ರಗಳು ಸಂಕ್ಷಿಸುವ ಹೊಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ.

## ಗ್ರಂಥಋಣ:


೧) ವಿಜಾಪುರ ಜಿಲ್ಲೆ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಡಾ. ಆರ್. ಮುನಿಸ್ವಾಮಿ, ಮೆ॥ ಅಭಿಮಾನಿ ಪ್ರಕಾಶನ, ಬೆಂಗಳೂರು–೧೯೯೯.

೨) ಸಮಗ್ರ ಕರ್ನಾಟಕ, ಇತಿಹಾಸ ಮತ್ತು ಸಂಸ್ಕೃತಿ (ದಖನ್ ಸಹಿತ) ಆರಂಭಿಕದಿಂದ ಕ್ರಿ.ಶ. ೨೦೧೫, ಪ್ರೊ. ಫಾಲಾಕ್ಷ, ಶಶಿ ಪ್ರಕಾಶನ C/o ಪ್ರೊ.ಫಾಲಾಕ್ಷ, ತಿಪಟೂರು.

೩) ಕರ್ನಾಟಕ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ (ಕ್ರಿ.ಶ. ೧೪ನೆಯ ಶತಮಾನದಿಂದ ೧೮ನೆಯ ಶತಮಾನ) ಡಾ. ವಜೀರ್ ಭಾಷಾ ಎಂ. ಬಾಗಾಯತ, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ (ರಿ), ಧಾರವಾಡ–೨೦೧೭